ಉತ್ತರ

ಅ) ಹೌದು ಬಂದಿದೆ. ಈ ಹಿಂದೆ, ಪುತ್ತೂರಿನಿಂದ ಸುಳ್ಯಕ್ಕೆ 110 ಕೆ.ವಿ. ವಿದ್ಯುತ್ ಪ್ರಸರಣಾ ಮಾರ್ಗವನ್ನು ಹಾಲಿ ಇರುವ 33 ಕೆ.ವಿ. ಪ್ರಸರಣಾ ಮಾರ್ಗದ ಕಾರಿಡಾರಿನಲ್ಲಿ ನಿರ್ಮಿಸಲು ಉದ್ದೇಶಿಸಲಾಗಿತ್ತು. ಆದರೆ ಈ ಕಾಮಗಾರಿಯನ್ನು ಪ್ರಾರಂಭಿಸಿದಲ್ಲಿ ಹಾಲಿ ಇರುವ 33 ಕೆ.ವಿ. ಪ್ರಸರಣಾ ಮಾರ್ಗದಲ್ಲಿ ಬರುವ ವಿದ್ಯುತ್ ವಿತರಣಾ ಕೇಂದ್ರಗಳಿಂದ ವಿದ್ಯುತ್ ಸರಬರಾಜಾಗುತ್ತಿರುವ ಗ್ರಾಹಕರಿಗೆ ಸಂಪೂರ್ಣವಾಗಿ ವಿದ್ಯುತ್ ನಿಲುಗಡೆಯಾಗುವ ಸಂಭವ ಇರುವುದರಿಂದಲೂ ಹಾಗೂ ಈ ಮಾರ್ಗವು ಕಾದಿಟ್ಟ ಅರಣ್ಯ ಪ್ರದೇಶದ ಮೂಲಕ ಸ್ವಲ್ಪ ದೂರ ಹಾದು ಹೋಗಬೇಕಾಗಿರುವುದರಿಂದಲೂ ಹಾಗೂ ಇನ್ನಿತರ ಅಡಚಣೆಗಳಿಂದಲೂ ಮಂಜೂರಾದ ಈ ಕಾಮಗಾರಿಯು ರದ್ದಾಗಿರುತ್ತದೆ.

ಪ್ರಸ್ತುತ, ಪುತ್ತೂರಿನಲ್ಲಿ ಸ್ಥಾಪಿಸಲು ಉದ್ದೇಶಿಸಿರುವ 220:110 ಕೆ.ವಿ. ಸ್ವೀಕರಣಾ ಕೇಂದ್ರದಿಂದ ಕುಂಬ್ರ, ಬೆಳ್ಳಾರೆ ಮಾರ್ಗವಾಗಿ ಸುಳ್ಯದವರೆಗೆ 110 ಕೆ.ವಿ. ವಿದ್ಯುತ್ ಪ್ರಸರಣಾ ಮಾರ್ಗವನ್ನು ನಿರ್ಮಿಸಲು ಉದ್ದೇಶಿಸಿದ್ದು, ಈ ಪ್ರಸರಣಾ ಮಾರ್ಗದ ಸರ್ವೆ ಕಾಮಗಾರಿಗೆ ಟೆಂಡರ್ ಕರೆಯಲಾಗಿದೆ. ಆದರೆ, ಈ ವಿದ್ಯುತ್ ಪ್ರಸರಣಾ ಮಾರ್ಗವನ್ನು ನಿರ್ಮಿಸುವ ಮೊದಲು ಪುತ್ತೂರು 220:110 ಕೆವಿ. ಸ್ವೀಕರಣಾ ಕೇಂದ್ರವನ್ನು ನಿರ್ಮಿಸಬೇಕಾಗಿರುತ್ತದೆ. ಕಾರ್ಕಳದ ಕೇಮಾರಿನಿಂದ ಪುತ್ತೂರಿಗೆ 84 ಕಿ.ಮೀ. ಉದ್ದದ 220 ಕೆ.ವಿ. ಜೋಡಿ ಪ್ರಸರಣಾ ಮಾರ್ಗವನ್ನು ಎಳೆಯುವ ಕಾಮಗಾರಿಯು ಪ್ರಗತಿಯಲ್ಲಿದೆ. ಆದರೆ, ಕೆಲವೊಂದು ಗ್ರಾಮಗಳಲ್ಲಿ ಭೂ ಮಾಲೀಕರ ಆಕ್ಷೇಪಣೆಯಿಂದಲೂ ಹಾಗೂ ನ್ಯಾಯಾಲಯಗಳಲ್ಲಿ ಇತ್ಯರ್ಥವಾಗದೇ ಬಾಕಿ ಉಳಿದಿರುವ ದಾವೆಗಳಿಂದಲೂ ನಿರ್ಮಾಣ ಕಾಮಗಾರಿಯ ಪ್ರಗತಿ ಕುಂಠಿತಗೊಂಡಿದೆ.

ಈ ಮೇಲಿನ ಕಾರಣಗಳಿಂದ ಪುತ್ತೂರಿನಿಂದ ಸುಳ್ಯದವರೆಗೆ ನಿರ್ಮಿಸಲು ಉದ್ದೇಶಿಸಿರುವ 110 ಕೆ.ವಿ. ವಿದ್ಯುತ್ ಪ್ರಸರಣಾ ಮಾರ್ಗದ ಕಾಮಗಾರಿಯನ್ನು ಪೂರ್ಣಗೊಳಿಸುವ ಅವಧಿಯನ್ನು ನಿಖರವಾಗಿ ತಿಳಿಸಲು ಕಷ್ಟಕರವಾಗುತ್ತದೆ.

ಸುಳ್ಯದಲ್ಲಿ ಬಸ್ ನಿಲ್ದಾಣ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 888(1067)

ಸದಸ್ಯರ ಹೆಸರು: ಶ್ರೀ ಅಂಗಾರ ಎಸ್.(ಸುಳ್ಯ)

ಪ್ರಶ್ನೆ

ಅ) ಸುಳ್ಯದಲ್ಲಿ ಬಸ್ ನಿಲ್ದಾಣ ರಚಿಸುವ ಉದ್ದೇಶ ಸರ್ಕಾರಕ್ಕೆ ಇದೆಯೇ ಇದ್ದರೆ ಯಾವಾಗ